ॐ

# ಶ್ರೀ ಪೂಮಾಣಿ ಕಿನ್ನಿಮಾಣಿ ರಾಜನ್ ದೈವಸ್ಥಾನ

## ಅಂಬಿಲಡ್ಕ

ಅಂಚೆ: ಕಿದೂರು, ಕುಂಬಳೆ, ಕಾಸರಗೋಡು- 671321







# ಜಾತ್ರಾ ಮಹೋತ್ಸವ

## ಆತ್ಮೀಯ ಆಮಂತ್ರಣ

**2025 ಏಪ್ರಿಲ್**
**04 ರಿಂದ 08**
**ರ ತನಕ**



ಶ್ರೀಮತಿ /ಶ್ರೀ.....................................................................

..........................................................................................

..........................................................................................

*With Best Wishes from*

**SONA CATERERS**
BENGALURU 90080 01663

**MALLESWARAM**

**+91 90080 01663**
**+91 98440 71663**



**Sona Ganesh Nayak**
Celebrity Chef

*With Best Compliments From :*

**TASTE of Coast**



A perfect ambience to spend quality time with your loved ones relishing on some finest coastal cuisines

080 23415 569 | 9741 555 569

#29, DR. RAJGOPAL ROAD, RAJ MAHAL VILAS, 2ND STAGE, SANJAYNAGAR, BENGALURU - 560 094

॥ ಓಂ ಗಂ ಗಣಪತಯೇ ನಮಃ ॥
॥ ಕಿದೂರು ಶ್ರೀ ಮಹಾದೇವ ಪ್ರಸನ್ನಃ ॥ ॥ ಶ್ರೀ ಪೂಮಾಣಿ ಕಿನ್ನಿಮಾಣಿ ಪ್ರಸನ್ನಃ ॥

ಆತ್ಮೀಯ ಸದ್ಭಕ್ತ ಬಾಂಧವರೇ,

ಸ್ವಸ್ತಿ ಶ್ರೀ ಕ್ರೋಧಿನಾಮ ಸಂವತ್ಸರದ ಮೀನ ಮಾಸ ದಿನ ೧೪ ಸಲುವ ಕೃಷ್ಣ ಪಕ್ಷ ಶುದ್ಧ **ದಿನಾಂಕ 24-03-2025ನೇ ಸೋಮವಾರ** ಬೆಳಿಗ್ಗೆ ಸಾಂಪ್ರದಾಯಿಕ **ಕೋಳಿಕುಂಟ**ದಿಂದ ಆರಂಭಗೊಂಡು ವಿಶ್ವಾವಸುನಾಮ ಸಂವತ್ಸರದ ಮೀನ ಮಾಸ ದಿನ ೨೧ ಸಲುವ

**ದಿನಾಂಕ 04-04-2025ನೇ ಶುಕ್ರವಾರದಿಂದ ಮೊದಲ್ಗೊಂಡು**

**ದಿನಾಂಕ 08-04-2025ನೇ ಮಂಗಳವಾರ**

ಪರ್ಯಂತ ಕಾಲಂಪ್ರತಿಯ ಪೂರ್ವಾಚಾರದಂತೆ ನಡೆದು ಬರುತ್ತಿರುವ ಇತಿಹಾಸ ಪ್ರಸಿದ್ಧ **ಅಂಬಿಲಡ್ಕ ಶ್ರೀ ಪೂಮಾಣಿ ಕಿನ್ನಿಮಾಣಿ ರಾಜನ್ ದೈವಸ್ಥಾನದಲ್ಲಿ**

# ವರ್ಷಾವಧಿ ಜಾತ್ರಾಮಹೋತ್ಸವವು

ದೈವಾನುಗ್ರಹದಿಂದ **ಬಂಬ್ರಾಣದ ಯಜಮಾನರಾದ ಶ್ರೀಮಾನ್ ಬಿ. ಮೋಹನ್‌ದಾಸ್ ರೈ**ಯವರ ನೇತೃತ್ವ ಹಾಗೂ ಸಾರಥ್ಯದಲ್ಲಿ, **ಬ್ರಹ್ಮಶ್ರೀ ವೇದಮೂರ್ತಿ ಶಂಕರನಾರಾಯಣ ಕಡಮಣ್ಣಾಯ, ಕರ್ಕುಳಬೂಡು** ಇವರ ಆಚಾರ್ಯತ್ವದ ಮುಖೇನ, ಕ್ಷೇತ್ರಕ್ಕೆ ಸಂಬಂಧಪಟ್ಟ ಪ್ರತಿಷ್ಠಿತ ಮನೆತನದವರ, ಪರಿಚಾರಕರ, ಮಾಗಣೆಯವರ ಎಲ್ಲಾ ಕುಟುಂಬಸ್ಥರ, ಸ್ಥಳೀಯ ಸಂಘ -ಸಂಸ್ಥೆಗಳ ಹಾಗೂ ಊರ ಸಮಸ್ತರ ಪೂರ್ಣ ಸಹಕಾರದೊಂದಿಗೆ ವಿವಿಧ ಧಾರ್ಮಿಕ ಹಾಗೂ ವೈದಿಕ ವಿಧಿ-ವಿಧಾನಗಳೊಂದಿಗೆ, ವೈವಿಧ್ಯಯಮಯ ವಿನೋದಾವಳಿಗಳ ಸಮೇತ ಬಹಳ ಸಂತೋಷ-ಸಂಭ್ರಮದಿಂದ ನಡೆಯಲಿರುವುದು.

ತತ್ಸಂಬಂಧ, ಸದ್ಭಕ್ತರಾದ ತಾವೆಲ್ಲರೂ ಕುಟುಂಬ ಸಮೇತರಾಗಿ ಬಂಧು-ಮಿತ್ರರೊಡಗೂಡಿ, ಹೆಚ್ಚಿನ ಸಂಖ್ಯೆಯಲ್ಲಿ ಸನ್ನಿಧಿಗೆ ಚಿತ್ತೈಸಿ, ತನು-ಮನ-ಧನಗಳ ಸಹಕಾರಗಳನ್ನಿತ್ತು, ಕಾರ್ಯಕ್ರಮಗಳಲ್ಲಿ ಭಾಗಿಗಳಾಗಿ, ಶ್ರೀ ದೈವಗಳ ಸಿರಿಮುಡಿ ಪ್ರಸಾದವನ್ನು ಸ್ವೀಕರಿಸಿ, ಕಾರ್ಣಿಕದ ಶಕ್ತಿಗಳ ಅಭಯಾಶೀರ್ವಾದಗಳಿಗೆ-ಪೂರ್ಣಾನುಗ್ರಹಕ್ಕೆ ಪಾತ್ರರಾಗಿ ಪುನೀತರಾಗಬೇಕಾಗಿ ಅಪೇಕ್ಷಿಸುವ,

**ಶ್ರೀ ಶಾಂತಾಳ್ವ ಯಾನೆ ಬಂಬ್ರಾಣ ಯಜಮಾನ್ ಬಿ. ಮೋಹನ್‌ದಾಸ್ ರೈ,**

**ಸಮಸ್ತ ಕುಟುಂಬಸ್ಥರು, ಬಂಧುಗಳು ಹಾಗೂ ಕ್ಷೇತ್ರಕ್ಕೆ ಸಂಬಂಧಪಟ್ಟ ಮನೆಯವರು**

**ಕ್ಷೇತ್ರಕ್ಕೆ ಸಂಬಂಧಪಟ್ಟ ಅರ್ಚಕ ವೃಂದ, ಪರಿಚಾರಕರು**
**ಊರ ಸಮಸ್ತರು ಮತ್ತು ಸಂಘ ಸಂಸ್ಥೆಗಳು**

**ಕ್ಷೇತ್ರಕ್ಕೆ ಸಂಬಂಧಪಟ್ಟ ಗ್ರಾಮ ಮತ್ತು**
**ಮಾಗಣೆಯ ಎಲ್ಲಾ ಮನೆಯವರು**

# : ಕಾರ್ಯಕ್ರಮಗಳು :

**ತಾರೀಕು: 24-03-2025ನೇ ಸೋಮವಾರ**

ಪೂರ್ವಾಹ್ನ 9-40ರಿಂದ 10-00 ಒಳಗೆ **ಕೋಳಿಕುಂಟ**

**ತಾರೀಕು 04-04-2025ನೇ ಶುಕ್ರವಾರ**

ಸಂಜೆ ಗಂಟೆ 6-30ರಿಂದ : **ಭಜನಾ ಸತ್ಸಂಗ**

1. **ಶ್ರೀ ವೀರಾಂಜನೇಯ ಭಜನಾ ಮಂದಿರ ( ರಿ,) ಶಿವಾಜಿನಗರ, ಬಂಬ್ರಾಣ ಮತ್ತು**
2. **ಶ್ರೀ ಗೋಪಾಲಕೃಷ್ಣ ಭಜನಾ ಸಂಘ, ಬಂಬ್ರಾಣ ಬೈಲು**

ರಾತ್ರಿ ಗಂಟೆ 7-00ಕ್ಕೆ : **ಬಂಬ್ರಾಣ ಯಜಮಾನರ ದೊಡ್ಡ ಮನೆಯಿಂದ ದೈವಗಳ ಕೀರ್ವಾಳು ಭಂಡಾರ ಆಗಮನ**

ರಾತ್ರಿ ಗಂಟೆ 7-30ಕ್ಕೆ : **ಕಿದೂರು ಶ್ರೀ ಮಹಾದೇವ ದೇವಸ್ಥಾನದಿಂದ ಹಾಗೂ ಬೆಜಪ್ಪೆ ಭಂಡಾರ ಮನೆಯಿಂದ ಕೀರ್ವಾಳು ಭಂಡಾರ ಆಗಮನ**

## ಸಾಂಸ್ಕೃತಿಕ ಕಾರ್ಯಕ್ರಮ

ರಾತ್ರಿ ಗಂಟೆ 7-30ರಿಂದ : **ನೃತ್ಯ ಕಾರ್ಯಕ್ರಮ**

ಪ್ರಾಯೋಜಕರು : **ನವಸೇವಾ ಮಹಿಳಾ ವೃಂದ (ರಿ.) ಅಂಬಿಲಡ್ಕ**

ರಾತ್ರಿ ಗಂಟೆ 8-00ಕ್ಕೆ : **ಸಭಾ ಕಾರ್ಯಕ್ರಮ ಮತ್ತು ನವಸೇವಾ ವೃಂದ (ರಿ.) ಅಂಬಿಲಡ್ಕ ಇದರ ವಾರ್ಷಿಕೋತ್ಸವದ ಸಂಭ್ರಮ**

ಅಧ್ಯಕ್ಷತೆ : **ಬಂಬ್ರಾಣ ಯಜಮಾನ್ ಶ್ರೀ ಬಿ. ಮೋಹನ್‌ದಾಸ್ ರೈ,** ಅನುವಂಶಿಕ ಮೊಕ್ತೇಸರರು – ಶ್ರೀ ಪೂಮಾಣಿ ಕಿನ್ನಿಮಾಣಿ ರಾಜನ್ ದೈವಸ್ಥಾನ, ಅಂಬಿಲಡ್ಕ

ಮುಖ್ಯ ಅತಿಥಿ : **ಶ್ರೀ ಶಂಕರ್ ರೈ ಮಾಸ್ಟರ್,** ಮಾಜಿ ಸದಸ್ಯರು, ಮಲಬಾರ್ ದೇವಸ್ವಂ ಬೋರ್ಡ್

ಉಪಸ್ಥಿತಿ : **ಶ್ರೀ ಈಶ್ವರ ಕುಲಾಲ್ ಅಂಬಿಲಡ್ಕ,** ಅಧ್ಯಕ್ಷರು, ನವಸೇವಾ ವೃಂದ (ರಿ) ಅಂಬಿಲಡ್ಕ

ಬಹುಮಾನ ವಿತರಣೆ : **ಶ್ರೀ ರಾಧಾಕೃಷ್ಣ ತುಂಗ ಕೆ. ಎಸ್,** ನಿವೃತ್ತ ಮುಖ್ಯೋಪಾಧ್ಯಾಯರು, ಎ.ಎಸ್.ಬಿ.ಎಸ್. ಇಚ್ಲಂಪಾಡಿ

ರಾತ್ರಿ ಗಂಟೆ 8-30ರಿಂದ : **ಶ್ರೀ ದೈವಗಳಿಗೆ ತಂಬಿಲ, ಅನ್ನಸಂತರ್ಪಣೆ**

ರಾತ್ರಿ ಗಂಟೆ 9-30ರಿಂದ : **ನೃತ್ಯ ಕಾರ್ಯಕ್ರಮ ಮುಂದುವರಿಯುವುದು**

## ತಾರೀಕು 05–04–2025ನೇ ಶನಿವಾರ

ಅಪರಾಹ್ನ ಗಂಟೆ 3–00ರಿಂದ : ಭಜನಾ ಸತ್ಸಂಗ

1. ಶ್ರೀ ರಾಮ ಭಜನಾ ಮಂದಿರ, ಅಂಬಿಲಡ್ಕ
2. ನವಸೇವಾ ಮಹಿಳಾ ವೃಂದ (ರಿ.) ಅಂಬಿಲಡ್ಕ

ಸಂಜೆ ಗಂಟೆ 4–30ರಿಂದ : ಶ್ರೀ ಕಿನ್ನಿಮಾಣಿ ದೈವದ ನೇಮ, ಪ್ರಸಾದ ವಿತರಣೆ, ಶ್ರೀ ದೈವಗಳಿಗೆ ತಂಬಿಲ

ರಾತ್ರಿ ಗಂಟೆ 7–30ರಿಂದ : ರಂಗ ಸಿರಿ

ತುಳು ಯಕ್ಷಗಾನ ಬಯಲಾಟ

ಶ್ರೀ ಕ್ಷೇತ್ರ ಹಿರಿಯಡ್ಕ ಮೇಳ, ಶ್ರೀ ವೀರಭದ್ರಸ್ವಾಮಿ ದಶಾವತಾರ ಮಂಡಳಿ ಇವರಿಂದ

**"ಜಾಜಿ ಮಲ್ಲಿಗೆ"**

ಪ್ರಾಯೋಜಕರು : ಲಯನ್ಸ್ ಆರ್ಟ್ಸ್ ಮತ್ತು ಸ್ಪೋರ್ಟ್ಸ್ ಕ್ಲಬ್, ಅಂಬಿಲಡ್ಕ

## ತಾರೀಕು 06–04–2025ನೇ ಭಾನುವಾರ

ಅಪರಾಹ್ನ ಗಂಟೆ 3–00ರಿಂದ : ಭಜನಾ ಸತ್ಸಂಗ – ವಾರಾಹಿ ಭಜನಾ ಸಂಘ. ಕಿದೂರು ಕುಂಟಂಗೇರಡ್ಕ

ಸಂಜೆ ಗಂಟೆ 4–30ರಿಂದ : ಶ್ರೀ ಪೂಮಾಣಿ ದೈವದ ನೇಮ, ಪ್ರಸಾದ ವಿತರಣೆ, ಶ್ರೀ ದೈವಗಳಿಗೆ ತಂಬಿಲ

ಪ್ರತಿಭಾಂಕುರ ಸಾಂಸ್ಕೃತಿಕ ಕಾರ್ಯಕ್ರಮಗಳು

ರಾತ್ರಿ ಗಂಟೆ 7–30ರಿಂದ : ಸಂಗೀತ ಗಾನ ಸಂಭ್ರಮ

ಯುವ ಪ್ರತಿಭೆಗಳಿಂದ ಭಕ್ತಿಗೀತೆ

1. ಕುಮಾರಿ ಅನ್ನಿಮ್ ಹಿಮಾನಿ, ಬಂಬ್ರಾಣ
2. ಕುಮಾರಿ ವರ್ಷ ಶೆಟ್ಟಿ, ಬಂಬ್ರಾಣ
3. ಮಾಸ್ಟರ್ ಭುವಿತ್ ಜಿ ಶೆಟ್ಟಿ, ಉಜಾರ್

ಯಕ್ಷ ಸಿಂಚನ :

1. ಮಾಸ್ಟರ್ ಭುವಿತ್ ಜಿ ಶೆಟ್ಟಿ, ಉಜಾರ್– ತೆಂಕುತಿಟ್ಟು
2. ಸಾಕ್ಷಿ ಶೆಟ್ಟಿ – ಬಡಗುತಿಟ್ಟು

## ನೃತ್ಯ ಸೌರಭ

**ಅನ್ಮಿತ ಶೆಟ್ಟಿ – ಜಾನಪದ ನೃತ್ಯ**

**ಸಾಂಸ್ಕೃತಿಕ ಕಲಾ ಮಂಜರಿ : ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಘ, ಕಾಸರಗೋಡು ಕಲಾವಿದರಿಂದ**

ರಾತ್ರಿ ಗಂಟೆ 8–00ರಿಂದ : **ಅಭಿನಂದನಾ ಪುರಸ್ಕಾರ ಸಮಾರಂಭ**

ಅಧ್ಯಕ್ಷತೆ : **ಬಂಬ್ರಾಣ ಯಜಮಾನ್ ಶ್ರೀ ಬಿ. ಮೋಹನ್‌ದಾಸ್ ರೈ,** ಅನುವಂಶಿಕ ಮೊಕ್ತೇಸರರು – ಶ್ರೀ ಪೂಮಾಣಿ ಕಿನ್ನಿಮಾಣಿ ರಾಜನ್ ದೈವಸ್ಥಾನ, ಅಂಬಿಲಡ್ಕ

ಮುಖ್ಯ ಅತಿಥಿ : **ಕನ್ಯಾನ ಶ್ರೀ ಸದಾಶಿವ ಶೆಟ್ಟಿ ಕುಳೂರು**, ಉದ್ಯಮಿ, ಹೇರಂಬ ಇಂಡಸ್ಟ್ರೀಸ್, ಮುಂಬೈ

## 2025 ಸಾಲಿನ ಪುರಸ್ಕೃತರು

**ಸಾಧಕ ಶಿರೋಮಣಿ** : **ಡಾ। ವಾಣಿಶ್ರೀ ಅವಿನಾಶ್ ಬಂಬ್ರಾಣ**–ವೈದ್ಯಕೀಯ ಸಂಶೋಧನೆ

**ಸೇವಾ ಭೂಷಣ್** : **ಶ್ರೀ ನರೇಶ್ ಆಳ್ವ** – ಸಮಾಜ ಸೇವೆ

**ಸಾಧಕ ರತ್ನ** : **ಸಚಿನ್ ಶೆಟ್ಟಿ** – ಚಲನಚಿತ್ರ ನಿರ್ದೇಶನ ಮತ್ತು ಸಾಹಿತ್ಯ

**ಪ್ರತಿಭಾ ಭೂಷಣ್** : **ಅನ್ಮಿತ್ ಶೆಟ್ಟಿ** – ಗಣಿತದ ಒಗಟುಗಳು, ನೃತ್ಯ

**ಪ್ರತಿಭಾ ಭೂಷಣ್** : **ಸಾಕ್ಷಿ ಶೆಟ್ಟಿ** – ನೃತ್ಯ, ಯಕ್ಷಗಾನ, ಆತ್ಮರಕ್ಷಣಾ ಕಲೆ

**ಕಲಾ ಸಂಸ್ಕೃತಿ ಸಾರಥಿ** : **ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಘ, ಕಾಸರಗೋಡು**

**ಕಲಾ ಸಂಸ್ಕೃತಿ ಸಾರಥಿ** : **ಶಿವಾಜಿ ಫ್ರೆಂಡ್ಸ್, ಬಂಬ್ರಾಣ**

ನಿರೂಪಣೆ : **ಏಳ್ಕಾನಗುತ್ತು ಶ್ರೀ ಶ್ರೀನಿವಾಸ್ ಆಳ್ವ ಕಳತ್ತೂರು ಮತ್ತು ಶ್ರೀಮತಿ ವಿನೋದ ಆರ್. ಪ್ರಸಾದ್**

ರಾತ್ರಿ ಗಂಟೆ 9–30ರಿಂದ : **ರಂಗ ಸಿರಿ**

# "ತನಿಯಜ್ಜೆ"

**ತುಳು ನಾಟಕ**

ಪ್ರಾಯೋಜಕರು : **ಓಂಕಾರ ಫ್ರೆಂಡ್ಸ್, ಬಂಬ್ರಾಣ**

## ತಾರೀಕು 07–04–2025ನೇ ಸೋಮವಾರ

ಅಪರಾಹ್ನ ಗಂಟೆ 3–00ರಿಂದ : **ಭಜನಾ ಸತ್ಸಂಗ – ಶ್ರೀ ಹನುಮ ಭಕ್ತ ಭಜನಾ ಸಂಘ, ಆರಿಕ್ಕಾಡಿ, ಕುಂಬ್ಳೆ**

ಸಂಜೆ ಗಂಟೆ 4–30ರಿಂದ : **ಶ್ರೀ ಬೀರ್ಣಾಳ್ವ ದೈವ ಹಾಗೂ ಪರಿವಾರ ದೈವಗಳ ನೇಮ, ಪ್ರಸಾದ ವಿತರಣೆ, ಶ್ರೀ ದೈವಗಳಿಗೆ ತಂಬಿಲ**

**ಸಾಂಸ್ಕೃತಿಕ ಕಾರ್ಯಕ್ರಮಗಳು**

ರಾತ್ರಿ ಗಂಟೆ 8–30ರಿಂದ : **ನೃತ್ಯ ಕಾರ್ಯಕ್ರಮ**

ರಾತ್ರಿ ಗಂಟೆ 9–30ರಿಂದ : **ಸೂಪರ್ ಹಿಟ್ ತುಳು ಸಾಮಾಜಿಕ ನಾಟಕ**

**ಬಯ್ಯಮಲ್ಲಿಗೆ**

ರಚನೆ : **ಡಾ. ಸಂಜೀವ ದಂಡೆಗೇರಿ**

ನಿರ್ದೇಶನ : **ಕೃಷ್ಣ ಕಳತ್ತೂರು**

ಪ್ರಾಯೋಜಕರು : **ನವಸೇವಾ ವೃಂದ (ರಿ), ಅಂಬಿಲಡ್ಕ** ಹಾಗೂ **ವಿಕ್ರಮ (ರಿ) ತಿಲಕನಗರ, ಬಂಬ್ರಾಣ**

## ತಾರೀಕು 08–04–2025ನೇ ಮಂಗಳವಾರ

ಪೂರ್ವಾಹ್ನ ಗಂಟೆ 11–00ಕ್ಕೆ : **ಶ್ರೀ ದೈವಗಳಿಗೆ ತಂಬಿಲ, ಭಂಡಾರ ಇಳಿಯುವುದು**

: **ಆಯನದ ಸಂಭ್ರಮ- ಸಡಗರದ ಧರ್ಮಾಚರಣೆ** :

**ನೀವೂ ಬನ್ನಿ ನಿಮ್ಮವರನ್ನೂ ಕರೆತನ್ನಿ; ಇದು ನಮ್ಮ ನಿಮ್ಮೆಲ್ಲರ ಧಾರ್ಮಿಕ ಸಂಸ್ಕೃತಿಯ ಪ್ರತೀಕ. ಹಿರಿಯರ ಧಾರ್ಮಿಕ ಪರಂಪರೆಯ ಹೆಜ್ಜೆಯ ಗುರುತುಗಳಲ್ಲಿ ಹೆಜ್ಜೆ ಇರಿಸೋಣ. ಪುಣ್ಯ ಕಾರ್ಯದಲ್ಲಿ ನಾವೆಲ್ಲರೂ ಭಾಗಿಗಳಾಗೋಣ, ಅಳಿಲು ಸೇವೆ ಸಲ್ಲಿಸೋಣ, ಪುಣ್ಯ ಗಳಿಸೋಣ.**

**ಸರ್ವರಿಗೂ ಆದರದ ಸ್ವಾಗತ.** :

# 2024-25 ಸಾಲಿನ ಪುರಸ್ಕೃತರು

### ಸಾಧಕ ಶಿರೋಮಣಿ



**ಡಾ। ವಾಣಿಶ್ರೀ ಅವಿನಾಶ್ ಬಂಬ್ರಾಣ**
ವೈದ್ಯಕೀಯ ಸಂಶೋಧನೆ

### ಸೇವಾ ಭೂಷಣ್



**ಶ್ರೀ ನರೇಶ್ ಆಳ್ವ**
ಸಮಾಜ ಸೇವೆ

### ಸಾಧಕ ರತ್ನ



**ಸಚಿನ್ ಶೆಟ್ಟಿ**
ಚಲನಚಿತ್ರ ನಿರ್ದೇಶನ ಮತ್ತು ಸಾಹಿತ್ಯ

### ಪ್ರತಿಭಾ ಭೂಷಣ್



**ಅನ್ಮಿತ್ ಶೆಟ್ಟಿ**
ಗಣಿತದ ಒಗಟುಗಳು, ನೃತ್ಯ

### ಪ್ರತಿಭಾ ಭೂಷಣ್



**ಸಾಕ್ಷಿ ಶೆಟ್ಟಿ**
ನೃತ್ಯ, ಯಕ್ಷಗಾನ, ಆತ್ಮರಕ್ಷಣಾ ಕಲೆ

### ಕಲಾ ಸಂಸ್ಕೃತಿ ಸಾರಥಿ

**ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಘ, ಕಾಸರಗೋಡು**

### ಕಲಾ ಸಂಸ್ಕೃತಿ ಸಾರಥಿ

**ಶಿವಾಜಿ ಫ್ರೆಂಡ್ಸ್, ಬಂಬ್ರಾಣ**

# : ಸೂಚನೆಗಳು :

1. ಭಕ್ತಾದಿಗಳು ಕ್ಷೇತ್ರದ ಆವರಣದಲ್ಲಿ– ಪರಿಸರದಲ್ಲಿ ಶುಚಿತ್ವವನ್ನು ಕಾಪಾಡತಕ್ಕುದು.
2. ಭಕ್ತಿಪೂರ್ವಕವಾಗಿ ಶ್ರೀ ದೈವಗಳ ಮಹೋತ್ಸವಕ್ಕೆ ಸಮರ್ಪಿಸುವ ಕೋಳಿ, ಅಕ್ಕಿ, ಪೂಜಾ ಸಾಮಗ್ರಿಗಳನ್ನು, ಹೂವು, ಹಿಂಗಾರ, ಸಿಯಾಳಗಳನ್ನು ಸೇವೆಗಳನ್ನು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಲಾಗುವುದು
3. ಭಕ್ತಾದಿಗಳು ಹರಕೆಯ ರೂಪದಲ್ಲಿ ಶ್ರೀ ಸಾನಿಧ್ಯಕ್ಕೆ ಸಮರ್ಪಿಸುವ ಎಲ್ಲಾ ವಸ್ತುಗಳನ್ನು ಹಾಗೂ ನಗದುಗಳನ್ನು (ಕಾಣಿಕೆ, ಅಕ್ಕಿ, ಹಣ್ಣು, ಕಾಯಿ, ಸಿಯಾಳ ,ಕೋಳಿ, ಬೆಳ್ಳಿ, ಬಂಗಾರ ...), ದೈವಸ್ಥಾನದ ಎದುರು ಭಾಗದಲ್ಲಿ ರೂಪಿಸಿರುವ ಸೇವಾ ಕೌಂಟರ್‌ನಲ್ಲಿ ಚೀಟಿ ಬರೆಯಿಸಿ ಒಳಗೆ ಸಮರ್ಪಿಸತಕ್ಕದ್ದು.
4. ಪುಷ್ಪಾಲಂಕಾರ, ಅನ್ನಸಂತರ್ಪಣೆ, ವಿದ್ಯುತ್ ದೀಪಾಲಂಕಾರ, ಸಿಡಿಮದ್ದು, ಇತ್ಯಾದಿಗಳಿಗೆ ಸಹಕಾರ ನೀಡಲಿಚ್ಚಿಸುವ/ಪ್ರಾಯೋಜಿಸಲಿಚ್ಛಿಸುವ ಸೇವಾದಾರರು ಮುಂಗಡವಾಗಿ ಬಂಬ್ರಾಣ ಯಜಮಾನರನ್ನು ಸಂಪರ್ಕಿಸಿ ಕೆಳಕಾಣಿಸಿದ ಬ್ಯಾಂಕ್ ಖಾತೆಗೆ ಹಣ ಜಮಾಯಿಸತಕ್ಕದ್ದು ಅಥವಾ ನಗದು ರೂಪದಲ್ಲಿ ಯಜಮಾನರಲ್ಲಿ ಪಾವತಿಸಿ ರಶೀದಿ ಪಡೆಯತಕ್ಕದ್ದು.
4. ಸೇವಾದಾರರು ಪ್ರಾಯೋಜತ್ವದ–ಸಹಕಾರವನ್ನು ದೃಢೀಕರಿಸಲು ಹಣ ಪಾವತಿಯ ರಶೀದಿಯ ಪ್ರತಿಯನ್ನು ನಮಗೆ ಕಳುಹಿಸಿಕೊಡತಕ್ಕದ್ದು

## ತಮ್ಮ ಸೇವಾ ಸೌಲಭ್ಯಕ್ಕಾಗಿ

ಖಾತೆದಾರರ ಹೆಸರು : B. Mohandas Rai
ಖಾತೆ ಸಂಖ್ಯೆ : 68730100019446
IFSC ಕೋಡ್ : BARBOVJKUKA
ಬ್ಯಾಂಕ್ ಹೆಸರು : Bank of Baroda
ಬ್ಯಾಂಕ್ ಶಾಖೆ : ಕುಂಬ್ಳೆ

ಅಥವಾ

Name : ಅಂಬಿಲಡ್ಕ ಶ್ರೀ ಪೂಮಾಣಿ ಕಿನ್ನಿಮಾಣಿ ರಾಜನ್ ದೈವ ಕ್ಷೇತ್ರ /AMBILADKA PK KSHETRA
A/C No : EDNA 002001004265
IFSC : ICIC0000104
Bank : The Ednad-Kannur Service Co-operative Bank Ltd.
Branch : Seethangoli (Via) Kumble

## ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿರಿ:

**ಶ್ರೀಮಾನ್ ಬಿ. ಮೋಹನ್‌ದಾಸ್ ರೈ,** ಬಂಬ್ರಾಣ ಯಜಮಾನರು.
ದೂರವಾಣಿ : 9945728741, 8217302184

ನಿತ್ಯಂ – ಶುಭಂ – ಮಂಗಳಂ

# ಸಾನಿಧ್ಯ ಹಿನ್ನೆಲೆ

ಪರಶುರಾಮನ ಕ್ಷೇತ್ರವಾದ ತುಳುನಾಡಿನಲ್ಲಿ ಅನೇಕ ದೈವ ದೇವರುಗಳು ನೆಲೆಸಿರುತ್ತಾರೆ. ಈ ನಾಡನ್ನು ದೈವ ದೇವರುಗಳ ನಾಡು ಎಂದೂ ಕರೆಯುವ ಪ್ರತೀತಿಯು ಇದೆ. ಇಲ್ಲಿ ನೆಲೆಸಿರುವ ದೈವಗಳಿಗೆ ಅದರದ್ದೇ ಆದ ಒಂದೊಂದು ಸತ್ಯ ಐತಿಹ್ಯಗಳು ಇದೆ. ಅಂತೆಯೇ ಅರಸು ದೈವಗಳಲ್ಲಿ ಮೇಲ್ಪಂಕ್ತಿಯಲ್ಲಿರುವ ಶ್ರೀ ಪೂಮಣಿ ಕಿನ್ನಿಮಾಣಿ ದೈವಗಳಿಗೆ ಸುಮಾರು 700 ವರ್ಷಗಳ ಹಿಂದಿನ ಚರಿತ್ರೆಯಿದೆ. ಅತ್ಯಂತ ಕಾರ್ಣಿಕ ಕ್ಷೇತ್ರವೆಂದೇ ಪ್ರಸಿದ್ಧಿ ಪಡೆದ ಶ್ರೀ ಪೂಮಾಣಿ ಕಿನ್ನಿಮಾಣಿ ದೈವಸ್ಥಾನ ರಾಜ ವೈಭವದಲ್ಲಿ ಮೆರೆಯುವ ಕ್ಷೇತ್ರ. ಈ ಕ್ಷೇತ್ರದ ಹೆಸರನ್ನು ಕೇಳದವರು ಬಹುಶಃ ತುಂಬಾ ಕಡಿಮೆ. ಏಕೆಂದರೆ ಈ ಕ್ಷೇತ್ರ ಸಾಧಾರಣ ಕ್ಷೇತ್ರವಲ್ಲ. ಶ್ರೀ ದೈವಗಳ ಸತ್ಯಘಟನೆ ಸಂಬಂಧಿತ ಅನೇಕ ಕುರುಹುಗಳು ಇದೀಗಲೂ ನಮ್ಮ ತುಳುನಾಡಿನಲ್ಲಿ ಕಾಣಸಿಗುತ್ತದೆ. ಅನಾದಿ ಕಾಲದಿಂದಲೂ ಇಲ್ಲಿಯ ದೈವಶಕ್ತಿ ಎಂಬುದು ಶರೀರಕ್ಕೆ ಶಕ್ತಿಯಾಗಿ ದೇಹಕ್ಕೆ ಆತ್ಮವಾಗಿ ಆಸ್ತಿಕರ ಶ್ರದ್ಧಾಭಕ್ತಿಯ ಕಾರ್ಣಿಕ ಶಕ್ತಿ ಕೇಂದ್ರವಾಗಿದ್ದು, ಇಲ್ಲಿ ಭಕ್ತರ ಸಕಲ ಇಷ್ಟಾರ್ಥಗಳು ಈಡೇರುತ್ತಿದೆ. ಎಲ್ಲೇ ಇದ್ದರೂ ಕೂಡ ತಮ್ಮ ಕಷ್ಟಗಳಿಗೆ ಇಲ್ಲಿನ ದೈವಗಳನ್ನು ನೆನೆಸಿ ಹರಕೆ ಕಟ್ಟಿಕೊಂಡರೆ ಆದಷ್ಟು ಬೇಗನೆ ನೆನೆಸಿದ ಕಾರ್ಯವನ್ನು ಈಡೇರಿಸುವ ದೈವಶಕ್ತಿ ಇಲ್ಲಿಯದಾಗಿದೆ.

ಅರಸು ದೈವಗಳಾದ ಪೂಮಾಣಿ ಕಿನ್ನಿಮಾಣಿ ದೈವಗಳು ಒಂದೇ ತೊಟ್ಟಿಲಲ್ಲಿ ಜನಿಸಿ ಮೇಘಲೋಕದಿಂದ ತುಳುನಾಡಿಗೆ ಬಂದರೆಂಬ ಪ್ರತೀತಿ ಇದೆ. ವೈದಿಕವಾಗಿ ಇವರು ಶ್ರೀರಾಮ ಲಕ್ಷ್ಮಣರ ಅವತಾರವೆಂದು ನಂಬುತ್ತಾರೆ. ಬೆಳ್ಳಿ ಕುದುರೆಯಲ್ಲಿ ಪಶ್ಚಿಮಘಟ್ಟದ ಮೇಲಿಂದ ಯಾತ್ರೆ ಆರಂಭಿಸಿದ ದೈವಗಳು ಘಟ್ಟ ಕುಮಾರ ಪರ್ವತ ಇಳಿದು ಬರುತ್ತಿರುವಾಗ ಸುಬ್ರಮಹ್ಮಣ್ಯ ದೇವರು ತಡೆಯೊಡ್ಡಿದ ಕಾರಣ ಕೋಪಗೊಂಡ ತಮ್ಮ ಕಿನ್ನಿಮಾಣಿ, ಕುಕ್ಕೆ ಕ್ಷೇತ್ರದ ಧ್ವಜಸ್ತಂಭಕ್ಕೆ ಬಾಣ ಪ್ರಯೋಗಿಸಿ ತುಂಡರಿಸಿದ್ದರಿಂದ ಅಣ್ಣ ತಮ್ಮ ದೈವಗಳಿಗೆ ಮತ್ತು ಸುಬ್ರಾಯ ದೇವರಿಗೆ ಏಳು ಹಗಲು ಮತ್ತು ಏಳು ರಾತ್ರಿ ಯುದ್ಧವು ನಡೆದು ಸುಬ್ರಾಯ ದೇವರಿಗೆ ಇವರು ದೇವಾಂಶ ಸಂಭೂತರೆಂದು ತಿಳಿದು, ರಾಜಿಯಾಗಿ, ದೈವಗಳು ಯುದ್ಧ ಮಾಡಿದ ತಪ್ಪಿಗಾಗಿ ಅನ್ನದಾನಕ್ಕೆಂದು ಹದಿನಾರು ಕೈಗಳಿರುವ ಚಿನ್ನದ ಕೊಪ್ಪರಿಗೆಯನ್ನು ಒಪ್ಪಿಸಿದ್ದಲ್ಲದೆ ತಮ್ಮ ತಂಗಿಯಾದ ದೈಯ್ಯಾರೆಯನ್ನು ಹೊಸುಗುಳಿಯಮ್ಮನಾಗಿ ಅಲ್ಲೇ ನೆಲೆಯೂರಿಸಿ, ಕುಕ್ಕೆಯಿಂದ ಹೊರಟ ಶ್ರೀ ಅರಸು ದೈವಗಳು ಸುಳ್ಯ ಸೀಮೆ ಮತ್ತು ಪುತ್ತೂರು ಏಳ್ನಾಡು ಪ್ರದೇಶಗಳಲ್ಲಿ ಹಲವಾರು ಕಾರಣಿಕಗಳನ್ನು ಪ್ರದರ್ಶಿಸಿ, ಹಲವಾರು ಕಡೆಗಳಲ್ಲಿ ನೆಲೆಯೂರಿ, ತುಳುನಾಡಿನಲ್ಲೇ ಸತ್ಯದ ಸೀಮೆ ಎಂಬ ಅಭಿಧಾನಕ್ಕೆ ಪಾತ್ರವಾದ ಕುಂಬಳೆ ಸೀಮೆಯ ಪ್ರದೇಶವಾದ ಪಡುಮಲೆಗೆ ಬಂದರು. ಅಲ್ಲಿಂದ ಮುಂದೆ ಪೂಮಾಣಿ ಕಿನ್ನಿಮಾಣಿ ದೈವಗಳು ಮೊದಲು ಅಡೂರಿನಲ್ಲಿ ಮಹಾಲಿಂಗೇಶ್ವರನಿಗೆ ಕಪ್ಪವನ್ನು ನೀಡಿ, ಕುಂಬಳೆ ಮೂರು ಸಾವಿರ ಸೀಮೆಯ ಪಟ್ಟದ ದೈವವಾದ ಬಿರ್ಣಾಳ್ವ ಮತ್ತು ಧೂಮಾವತಿಯನ್ನು ಭೇಟಿಯಾಗಿ ಅವರನ್ನು ಒಲಿಸಿ, ತಮ್ಮ ಜೊತೆ ಕಾರಣಿಕ ಮೆರೆಯಲು ಜೊತೆಯಾಗಿ ಸವಾರಿ ಆರಂಭಿಸಿ ತಮ್ಮ ಯಾತ್ರೆಯ ಉದ್ದೇಶದಂತೆ "ಆದಿ ಪಡುಮಲೆ ಅಂತ್ಯ ಪುತ್ತೆ"ಯ ಪ್ರಕಾರ ಪೈಕ, ಬೆದ್ರಡ್ಕ ಕ್ಷೇತ್ರಕ್ಕೆ ಆಗಮಿಸಿ, ಅಲ್ಲಿಯೂ ಧ್ವಜವೇರಿಸಿ, ಜಾತ್ರೋತ್ಸವ ನಡೆಸಿ, ಬೆಳ್ಳಿಯ ಕುದುರೆಯ ಮೂಲಕ ಪುತ್ತಿಗೆಗೆ ಹೋಗುತ್ತಿರಲು, ದಾರಿಯಲ್ಲಿ 'ಅಂಬಿಲಡ್ಕ' ಎಂಬ ಪುರಾತನ ಧರ್ಮದ ತಾಣದಲ್ಲಿ ಕಟ್ಟೆಯನ್ನು ಕಂಡು ವಿಶ್ರಮಿಸುವರು. ಆಗ ಅಲ್ಲಿ ವಿಶ್ರಮಿಸುತ್ತಿರುವ ಈ ಇಬ್ಬರು ರಾಜಕುಮಾರರು ಮತ್ತು ಅವರ ಪರಿವಾರವನ್ನು ಬಂಬ್ರಾಣ ರಾಜಮನೆತನದ ಮಹಾಮಹಿಮರಾದ ಶ್ರೀ ಶಾಂತಾಳ್ವರು ಕಂಡು ಅತ್ಯಂತ ಆಶ್ಚರ್ಯಗೊಂಡು ಕಿದೂರು ಮಹಾಲಿಂಗೇಶ್ವರ ದೇವಾಲಯದ ತಂತ್ರಿಗಳಲ್ಲಿ ಕೇಳಲು, ತಂತ್ರಿಗಳು ಅವರಿಗೆ ಪೂಮಾಣಿ ಕಿನ್ನಿಮಾಣಿ ದೈವಗಳ ಇಷ್ಟ ತಿಳಿಸಲು, ಮಹಾಮಹಿಮ ಬಂಬ್ರಾಣ ಯಜಮಾನ ಶ್ರೀ ಶಾಂತಾಳ್ವರು ತಮ್ಮ ಜೊತೆಯಿದ್ದ ಗ್ರಾಮದ 7 ಪ್ರತಿಷ್ಠಿತ ಮನೆತನಗಳಾದ ಬಂಬ್ರಾಣಬೈಲು ಕಿಞ್ಞಣ್ಣ, ಕೆಳಗಿನ ಬೈಲು ಸಂಕರ, ನೀಲಪ್ಪಾಡಿ ಸೇಕ, ಉಜಾರು ಸಂಕಯ್ಯಾಳ್ವ, ಮುಗೇರ್ (ಕಾನಾರ್ಪಾಡಿ) ಕೊಂಡೆ, ಕೆಳಗಿನ ಉಜಾರ್ ಸಾಂತ ಹಾಗೂ ಮುಗೇರಿನ ಸಾಂತರನ್ನು ಸೇರಿಸಿ ಅಂಬಿಲಡ್ಕದಲ್ಲಿ ಆರಾಧನೆ ಆರಂಭಿಸಿದರು. ಅಲ್ಲಿಂದ ಮುಂದೆ ಪುತ್ತಿಗೆಗೆ ಅಣ್ಣ–ತಮ್ಮ ದೈವಗಳ ಸವಾರಿ ಆರಂಭಗೊಂಡಾಗ ಪಟ್ಟದದೈವ ಬೀರ್ಣಾಳ್ವನು ಅಂಬಿಲಡ್ಕದ ಧರ್ಮದ ಮಣ್ಣಿನಲ್ಲೇ ನೆಲೆಯಾದನು ಹಾಗೂ ಧೂಮಾವತಿ ತಾಯಿಯು ಪುತ್ತಿಗೆಯ ಕಡೆಗೆ ಅಣ್ಣ ತಮ್ಮ ದೈವಗಳ ಜೊತೆ ಸವಾರಿ ಹೊರಟು ಅಂತ್ಯ ಪುತ್ತಿಗೆಯಲ್ಲಿ ನೆಲೆಯಾದರು.

ಅಂಬಿಲಡ್ಕ ಶ್ರೀ ಪೂಮಾಣಿ ಕಿನ್ನಿಮಾಣಿ ಕ್ಷೇತ್ರಕ್ಕೆ, ಕಿದೂರು ಶ್ರೀ ಮಹಾದೇವ ಕ್ಷೇತ್ರಕ್ಕೂ ಹಾಗೂ ಆರಿಕ್ಕಾಡಿ ಪಾರೆಸ್ಥಾನ ಶ್ರೀ ಭಗವತಿ ಆಲಿ ಚಾಮುಂಡಿ ಕ್ಷೇತ್ರಕ್ಕೂ ಅವಿನಾಭಾವ ಸಂಬಂಧವಿದೆ. ದೈವ–ದೈವಗಳ ಕ್ಷೇತ್ರ ಸಂಬಂಧ ಮಾತ್ರವಲ್ಲದೇ ಈ ಕ್ಷೇತ್ರಗಳಿಗೆ ಪರಂಪರಾಗತವಾಗಿ ಅನುವಂಶಿಕ ಮೊಕ್ತೇಸರರು ಬಂಬ್ರಾಣದ ಯಜಮಾನರೇ

ಆಗಿದ್ದು, ಇಂದಿಗೂ  ಕಿದೂರು ಶ್ರೀ ಮಹಾದೇವ ಕ್ಷೇತ್ರಕ್ಕೆ ವಿಶೇಷ ದಿನದ ಉತ್ಸವಗಳಲ್ಲಿ ಈ ಉಳ್ಳಾಕುಲ ಕ್ಷೇತ್ರದಿಂದ ಭಂಡಾರ ಹೋಗಿಯೇ ಆಗಬೇಕು ಹಾಗೂ ಕಿದೂರು  ಕ್ಷೇತ್ರದಿಂದ ಅಂಬಿಲಡ್ಕ ಜಾತ್ರೆಯ ಸಂದರ್ಭದಲ್ಲಿ ಭಂಡಾರ ಬರುವ ಕ್ರಮ ನಡೆದುಕೊಂಡು ಬರುತ್ತಿದೆ. ಹಾಗೆಯೇ ಆರಿಕ್ಕಾಡಿ ಪಾರೆಸ್ಥಾನ ಶ್ರೀ ಭಗವತಿ ಆಲಿಚಾಮುಂಡಿ ಕ್ಷೇತ್ರದ ಉತ್ಸವವು ಅನುವಂಶಿಕ ಮೊಕ್ತೇಸರರಾದಂತಹ ಬಂಬ್ರಾಣದ ಯಜಮಾನರ ಉಪಸ್ಥಿತಿಯಲ್ಲಿಯೇ ನಡೆಯುವ ಹಾಗೂ ಪಾರೆಸ್ಥಾನದ ದೈವಗಳು ಅಂಬಿಲಡ್ಕದ ದೈವಗಳನ್ನು ಅಂಬಿಲಡ್ಕದಲ್ಲಿ ಭೇಟಿಮಾಡುವ  ಸಂಪ್ರದಾಯವೂ ಇದೆ.

ಕುಂಬಳೆಯು ಬೆಡಿ ಉತ್ಸವಕ್ಕೆ, ಪೊಳಲಿಯು ಚೆಂಡಿನ ಉತ್ಸವಕ್ಕೆ ಹೇಗೆ ಹೆಸರುವಾಸಿಯಾಗಿದೆಯೋ ಹಾಗೆಯೇ ಬಂಡಿ ಉತ್ಸವ ಮತ್ತು ಸಾಂಪ್ರದಾಯಿಕ ಕೋಳಿಕಟ್ಟಕ್ಕೆ ಹೆಸರು ಪಡೆದ ಕ್ಷೇತ್ರವೂ ಹೌದು. ಇಂದಿಗೂ ಕೂಡ ಈ ದೈವಸ್ಥಾನದ ಆಡಳಿತ ಮತ್ತು ನಿರ್ವಹಣೆ ಪರಂಪರಾಗತವಾಗಿ ಬಂಬ್ರಾಣ ರಾಜಮನೆತನದ  ಯಜಮಾನ ಶ್ರೀ ಶಾಂತಾಳ್ವರ  ನೇತೃತ್ವ ಮತ್ತು ಸಾರಥ್ಯದಲ್ಲಿಯೇ ಸರ್ವತ್ರ ಸುಭಿಕ್ಷಾರ್ಥವಾಗಿ ಧಾರ್ಮಿಕ ಪರಂಪರೆಯಂತೆ ಪೂಜಾ-ಉತ್ಸವ-ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಕ್ರಮಗಳೊಂದಿಗೆ ವರ್ಷದಿಂದ ವರ್ಷಕ್ಕೆ ಯಶಸ್ವಿಯಾಗಿ ನಡೆಯುತ್ತಾ ಬರುತ್ತಿದೆ. ಮಾಸಿಕ ಸಂಕ್ರಾಂತಿ ಹಾಗೂ ವಿಶೇಷ ಸಂದರ್ಭಗಳಲ್ಲಿ ದೈವಗಳಿಗೆ ತಂಬಿಲಪೂಜೆ, ಪತ್ತನಾಜೆ, ದೀಪಾವಳಿ ಪರ್ಬ, ಇತ್ಯಾದಿ ಪ್ರಾಚೀನ ಸಾಂಪ್ರದಾಯಿಕ ಪದ್ದತಿಗಳನ್ನು ಇಂದಿಗೂ ಇಲ್ಲಿ ತಪ್ಪದೆ ಆಚರಿಸಲ್ಪಾಗುತ್ತಿದೆ. ದೈವಗಳಿಗೆ ಹರಕೆಯ ತಂಬಿಲಗಳನ್ನು ಸಂಕ್ರಾಂತಿಯ ನಂತರದ 2 ದಿನಗಳಲ್ಲಿ ಸಲ್ಲಿಸಲಾಗುತ್ತದೆ. ವರ್ಷಂಪ್ರತಿ ಏಪ್ರಿಲ್ ತಿಂಗಳಿನ ಐದು ದಿನ ಕ್ಷೇತ್ರದ ಅನುವಂಶಿಕ ಮೊಕ್ತೇಸರರ ಮುಂದಾಳತ್ವದಲ್ಲಿ ಇಲ್ಲಿ ನಮ್ಮ ನೆಲದ ಸಂಸ್ಕೃತಿ, ಸಂಪ್ರದಾಯ, ಪರಂಪರೆಯ ಮತ್ತು ಮೌಲ್ಯಗಳನ್ನು ಎತ್ತಿಹಿಡಿದು ಆ ಶಕ್ತಿಗಳ ಕೀರ್ತಿ-ಕಾರ್ಣಿಕ ಮೆರೆಸುವ ವಾರ್ಷಿಕ ಜಾತ್ರೆಯನ್ನು ಅದ್ದೂರಿಯಾಗಿ ಅತೀ ವಿಜೃಂಭಣೆಯಿಂದ ನಡೆಸಲಾಗುತ್ತದೆ. ದೈವಗಳ ಸಾಕಾರದ ಈ ಅಪ್ರತಿಮ ನೇಮೋತ್ಸವಕ್ಕೆ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಾರೆ. ಜಿಲ್ಲೆ ಅಲ್ಲದೆ ಹೊರ ಜಿಲ್ಲೆಗಳಿಂದಲೂ ಅಲ್ಲದೆ ಹೊರ ರಾಜ್ಯಗಳಿಂದಲೂ ಕೂಡ ಜಾತ್ರೆಗೆ ಬಂದು ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಕಣ್ತುಂಬಿಕೊಳ್ಳುತ್ತಾರೆ.

ಈ ದೈವಸ್ಥಾನದ ಇನ್ನೊಂದು ವೈಶಿಷ್ಟ್ಯ ಎಂದರೆ ಇಲ್ಲಿ ಸಂಜೆ ಜಾತ್ರೆ. ಕಿರಿಯ ಉಳ್ಳಾಕುಲು – ಶ್ರೀ ಕಿನ್ನಿಮಾಣಿ ಅರಸು ದೈವದ ಜಾತ್ರೆ ಮೊದಲು ನಡೆದು ನಂತರ ಹಿರಿಯ ಉಳ್ಳಾಕುಲು ಶ್ರೀ ಪೂಮಾಣಿ ದೈವ ಹಾಗೂ ಮೂರು ಸಾವಿರ ಸೀಮೆಯ ಪಟ್ಟದ ದೈವವಾದ ಬೀರ್ಣಾಳ್ವನ ನೇಮ ನಡೆಯುವುದು ಅನಾದಿಕಾಲದಿಂದಲೂ ವಾಡಿಕೆ. ಜಾತ್ರೆಯ ಪ್ರತಿದಿನ ವಿಜೃಂಭಣೆಯ ನೇಮ, ಬಂಡಿ ಉತ್ಸವಗಳ ವೈವಿಧ್ಯಮಯ ಕಾರ್ಯಕ್ರಮಗಳ ಐಭೋಗ. ಇಲ್ಲಿನ ಜಾತ್ರೆಗೆ ಸ್ವಲ್ಪ ಮಳೆಯಾದರೂ ಬಂದೇ ಬರುತ್ತದೆ. ಇದು ಇಲ್ಲಿಯ ಕಾರಣಿಕಕ್ಕೆ ಇನ್ನೊಂದು ಸಾಕ್ಷಿಯೆಂದೇ ಹೇಳಬಹುದು .

ಅದೇನೇ ಆಗಲಿ ಅಂಬಿಲಡ್ಕ ಎಂಬ ಕ್ಷೇತ್ರ ಕುಂಬಳೆ, ಆರಿಕ್ಕಾಡಿ, ಕಿದೂರು, ಬಂಬ್ರಾಣ, ಉಜಾರ್ ಉಳುವಾರ್ ಗ್ರಾಮದ ಭಕ್ತರು ಮಾತ್ರವಲ್ಲದೆ ಹೊರಗಿನ ಊರಿನವರೂ ಕೂಡ ಭಯ ಭಕ್ತಿಯಿಂದ ನಂಬುವ ಸತ್ಯ ದೈವವಾಗಿ, ಈ ಮೂಲಕ ರಾಜನ್ ದೈವಗಳ ಪ್ರತಿಷ್ಠೆಯನ್ನು ಹೆಚ್ಚಿಸಿ ಲಕ್ಷಾಂತರ ಜನರ ಹೃದಯದಲ್ಲಿ ವಿಶೇಷ ಸ್ಥಾನವನ್ನು ಪಡೆದಿದ್ದಾರೆ. ಹಿಂದೂ ಜನರು ಮಾತ್ರವಲ್ಲದೆ ಮುಸ್ಲಿಂ ಜನರೂ ಕೂಡಾ ಇಲ್ಲಿಗೆ ಬರುವುದು, ಇಲ್ಲಿನ ಕಾರಣಿಕತೆಗೆ ಪ್ರತ್ಯಕ್ಷ ಸಾಕ್ಷಿಯಾಗಿದೆ. ಈ ಕಾರ್ಣಿಕದ ನೆಲೆಯಲ್ಲಿ ವಿರಾಜಿಸುವ ಇರುವೆರ್ ಉಳ್ಳಾಕುಲು ದೈವಗಳು, ಶ್ರೀ ಬೀರ್ಣಾಳ್ವದೈವ ಹಾಗೂ ಪರಿವಾರ ದೈವಗಳು, ಚರ್ಮದೃಷ್ಟಿಯ ಪ್ರಜಾ ಸಮುದಾಯದ ಮುಂದೆ ಮಾಯಾದೃಷ್ಟಿಯನ್ನು ಪರಿಚಯಿಸುತ್ತ ಜನರ ಸರಿ ತಪ್ಪುಗಳ್ಳನ್ನು ತೂಗಿಸುತ್ತಾ ಮುನ್ನಡೆಸಿ ನಾಲ್ಕು ರಾಜ್ಯಕ್ಕೆ ಹೆಸರು ತಂದುಕೊಡುವ ಸಂಕಲ್ಪವನ್ನು ಭಕ್ತರ ಹರಕೆ, ಪೂಜೆ, ಪ್ರಾರ್ಥನೆಗಳಿಗೊಲಿದು ಸದಾ ನಂಬಿದವರನ್ನು ಕಾಯುತ್ತಾ, ಸರಿಯಾದ ಪಥದಲ್ಲಿ ಮುನ್ನಡೆಸುತ್ತಾ  ಇಷ್ಟಾರ್ಥಗಳ್ಳನ್ನು ನೆರವೇರಿಸಿಕೊಂಡು ಬರುತ್ತಿರುವುದು ಸತ್ಯವೆಂದು ನಂಬಿದ ಭಕ್ತರ ಮಾತು.

ಅಂಬಿಲಡ್ಕ ದೈವಸ್ಥಾನ ಎಂದಿಗೂ ಕಾರ್ಣಿಕದ ನೆಲೆ. ಇಲ್ಲಿ ವಿರಾಜಿಸುವ ದೈವಗಳು, ಆರಾಧಕರ ಪಾಲಿಗೆ ದಾರಿದೀಪಗಳಾಗಿರುವುದು ಅತಿಶಯೋಕ್ತಿ ಅಲ್ಲ. ಚರಿತ್ರೆಯ ಪುಟಗಳಲ್ಲಿ ನಮ್ಮ ಹಿರಿಯರ ಆರಾಧನೆ-ಆಡಳಿತ-ಕಟ್ಟುಪಾಡು-ನಂಬಿಕೆ-ನಡೆಗಳು ಇಂದಿಗೂ ಜೀವಂತವಾಗಿದ್ದು, ನಮ್ಮ ಸಾಮಾಜಿಕ-ಸಾಂಸ್ಕೃತಿಕ ಸಾಮರಸ್ಯಕ್ಕೆ ಕಾರಣವಾಗಿರುವ ಈ ವ್ಯವಸ್ಥೆಗಳು ಜೀವಂತವಾಗಿರುವುದೇ ಅವುಗಳ ಸತ್ಯಕ್ಕೆ ಸಾಕ್ಷಿಯೆನಿಸುತ್ತದೆ.

"ನಾಡೆಲ್ಲ ನಲಿಯಲಿ, ಬೀಡೆಲ್ಲ ಬೆಳೆಯಲಿ, ನಾಡು ನುಡಿ ಹಬ್ಬ ಹರಡಲಿ– ನಾಡೊಡೆಯ ನಾಡವೊಲವುಗೊಂಡು ಬಾಳಲಿ...!"

*With Best Compliments from :*

ಅಧ್ಯಕ್ಷರು ಮತ್ತು ಸದಸ್ಯರು

**ನವಸೇವಾ ವೃಂದ (ರಿ)**

ಅಂಬಿಲಡ್ಕ

ಮತ್ತು

**ನವಸೇವಾ ಮಹಿಳಾ ವೃಂದ (ರಿ)**

ಅಂಬಿಲಡ್ಕ

*With Best Compliments from :*

**BAMBRANA KSHEEROLPADAKA SHAKARANA SANGHA**

**No. KG. 19(D), APCOS,**
ANDITHADKA,
P.O. BAMBRANA - 671 321.
PH. : 9633874619

Email : kssbombrana@gmail.com

**PRESIDENT & DIRECTORS**

**SECRETARY & STAFF**

*With Best Compliments from :*

**LION'S AMBILADKA**
**ARTS & SPORTS CLUB**

Regd No: CA/298/2024
**AMBILADKA**

*With Best Compliments From*

**STANDARD BAKERY**
**BADIADKA ROAD**
**KUMBLA**

*With Best Compliments from :*

**ದೇರಣ್ಣ ಶೆಟ್ಟಿ**
**ಮಂಜುನಾಥ ಆಳ್ವ**

**ಕಲ್ಲುರ್ಟಿ ಕಲ್ಕುಡ ಸೇವಾ ಸಮಿತಿ**
ಅಂಬಿಲಡ್ಕ - ಬಟ್ಟೆಕಲ್ಲು

ಮೊಬೈಲ್ : 9048140503

*With Best Compliments from :*

**THE AMBILADKA VANITHA SERVICE CO-OPERATIVE SOCIETY LTD; NO. S 421**

**P.O. KUMBLA**
Phone No;7736213219

Email : ambiladkavanithascs@gmail.com

**PRESIDENT & DIRECTORS** — **SECRETARY & STAFF**

*With Best Compliments From :*

**Mob. : 9847037108**
**7907548832**

**PKM**
**OIL & FLOUR MILL**

**Dinesh Beedi Junction**
**Thilaka Nagar, Bombrana**

*With Best Compliments from :*

**Mob.: 9745855372**
**9400118199**



**ಕಲ್ಪವೃಕ್ಷ**
**KALPAVRUKSHA**
**COCONUT CLIMBER**

**K.AC.M. SOCIETY, NEERCHAL**

ತೆಂಗಿನಕಾಯಿ ಕೊಯ್ಯಲು ಸಂಪರ್ಕಿಸಿರಿ
തേങ്ങയിടുന്നതിന് ബന്ധപ്പെടുക

*With Best Compliments from :*




PRAJYOT KUSUMBHI PRIVATE LIMITED

# Gabbana

MENS WEDDING COLLECTION

OBERLA COMPLEX, KUMBLA

☎ 9037814786

*With Best Compliments from :*

# KOTTOODAL
HARDWARE

**Ashraf K.S**
09995214000

**09746367899** (SALES)
**09633328967** (ACCOUNTS)

BADIADKA ROAD
**KUMBLA**-671321
KASARAGOD DT., KERALA

**GSTIN**: 32ANKPK9051C1Z8
kottoodal@gmail.com

*With Best Compliments from :*



**Mob. : 9746353988**

# A.B.

## CHICKEN CENTRE

**WHOLESALE & RETAIL**

**MARKET ROAD, KUMBLA**

Contact for : **MARRIAGE ORDERS**

**TAISON & BROILER**

*With Best Compliments From :*

**Ph : 9916283256**

# UJAR TRADERS
# AR COPRAS

KAIKAMBA UPPALA
&
ANANTHAPURA INDUSTRIAL AREA
KUMBLE.

**We buy cocunt and copra at door step.**

ಮನೆಗೆ ಬಂದು ಉತ್ತಮ ಬೆಲೆಗೆ ತೆಂಗಿನಕಾಯಿ
ಮತ್ತು ಕೊಬ್ಬರಿಯನ್ನು ಖರೀದಿಸಲಾಗುವುದು

With Best Compliments From :

UMESH NAIK

Mob. : 9449084388
9591438855

SRI DURGA
INFRA CONSTRUCTIONS
BANGALORE



With best compliments from

Santhosh K
Mob. : 9447693593

BATTUNHI
TRADERS

MARKET ROAD, KUMBLA - 671 321.

PRN MOTORSPORT

- Motorcycle Training School
- Road Safety Program
- National Racing Team
- Adventure Training Program
- Corporate Training Program








+91 93640 19944 www.prnmotorsport.com